ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ 8ನೇ ಮೇ 1998ರಂದು

ಸದನವು ವಿಧಾನ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠದಲ್ಲಿ ಉಪಸ್ಥಿತರಿದ್ದರು.

ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ಸ್ಥಾನದಲ್ಲಿ ಯಾರೂ ಕಾಣುತ್ತಿಲ್ಲ.

ಅಧ್ಯಕ್ಷರು : ಇವತ್ತು ಮೇಲ್ಮನೆ ಚುನಾವಣೆ ಇರುವುದರಿಂದ, ತಾವು ಸಹಕರಿಸಿಕೊಂಡು ಹೋಗಬೇಕು. ಮಾನ್ಯ ಎಂ.ಪಿ. ಪ್ರಕಾಶ್‌ರವರೇ, ಈ ರೀತಿ ಮಾಡೋಣ. ಎಲ್ಲಾ ಆ ಸದಸ್ಯರ ಪ್ರಶ್ನೆಗಳು ಇರುವುದರಿಂದ, ಅವರು ಒಳಗಡೆ ಬರಲಿ ತಗೆದುಕೊಳ್ಳೋಣ. ಅಲ್ಲಿಯವರೆಗೆ ಈಗ ಇದ್ದವರು ಪ್ರಶ್ನೆಗಳನ್ನು ಕೇಳಲಿ.

ವಿಜಾಪುರ ನಗರಕ್ಕೆ ಸಿಟಿ ಬಸ್ ನಿಲ್ದಾಣ.

356 - ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿ ಸಿಟಿ ಬಸ್ ಸ್ಟ್ಯಾಂಡ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಪ್ರಯಾಣಿಕರ ಅನುಕೂಲಕ್ಕಾಗಿ ಸಿಟಿ ಬಸ್ ಸ್ಟ್ಯಾಂಡನ್ನು ಯಾವಾಗ ನಿರ್ಮಿಸಲಾಗುವುದು ಹಾಗೂ ಎಲ್ಲಿ ನಿರ್ಮಿಸಲಾಗುವುದು (ಪೂರ್ತಿ ವಿವರ ನೀಡುವುದು)?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಹೌದು. ಸಂಸ್ಥೆಯ ವತಿಯಿಂದ ನಿರ್ಮಿಸಲಾದ ಕೇಂದ್ರ ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ಸುಗಳನ್ನು ಮತ್ತು ದೂರ ಮಾರ್ಗದ ಬಸ್ಸುಗಳನ್ನು ಓಡಿಸಲಾಗುತ್ತಿದೆ.

ಆ) ನಗರ ಸಾರಿಗೆ ಬಸ್ಸುಗಳಿಗೆ ಪ್ರತ್ಯೇಕ ಬಸ್ ನಿಲ್ದಾಣ ನಿರ್ಮಿಸಲು ನಿವೇಶನ ಪಡೆಯಲು ಸಾಕಷ್ಟು ಪ್ರಯತ್ನ ಮಾಡಲಾಗಿದೆ. ಅದರ ವಿವರ ಕೆಳಗಿನಂತೆ ಇರುತ್ತದೆ.

ಅ) 1950 ರಿಂದ 1963ರವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಬಸ್ ನಿಲ್ದಾಣದ ಉಪಯೋಗಕ್ಕಾಗಿ ತಾಜಾ ಬಾವಡಿ ಆವರಣವನ್ನು ಕೇಳಲಾಗಿತ್ತು.

ಬ) ಸದ್ಯಕ್ಕೆ ಇರುವ ಬಸ್ ನಿಲ್ದಾಣದ ಸಮೀಪ ಇರುವ ಸರ್ಕಾರಿ ಗಂಡು ಮಕ್ಕಳ ಮಾಧ್ಯಮಿಕ ಶಾಲೆಯ ಆಟದ ಮೈದಾನದಲ್ಲಿ 1 ಎಕರೆ ಪ್ರದೇಶವನ್ನು ಒದಗಿಸಲು ಕೇಳಲಾಗಿತ್ತು.

ಕ) ವಾರ್ಡ್ ನಂ.6ರ ಸಿ.ಟಿ.ಎಸ್. ನಂ.1 ಮತ್ತು 10ರಲ್ಲಿ 1 ಎಕರೆ 23 ಗುಂಟೆ ಜಾಗ ಸ್ವಾಧೀನ ಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಬಿಜಾಪುರ ಇವರನ್ನು ಕೋರಲಾಗಿತ್ತು. ಆದರೆ ಆ ಜಾಗ ಪ್ರಾಚ್ಯ ಸಂಶೋಧನಾ ಇಲಾಖೆಗೆ ಸಂಬಂಧಿಸಿದ್ದು, ಈ ಬೇಡಿಕೆಗೆ ಒಪ್ಪಿಗೆ ನೀಡಿರುವುದಿಲ್ಲ. ಹಾಗೂ ಮಾಧ್ಯಮಿಕ ಶಾಲೆ ಜಾಗವನ್ನು ಶಿಕ್ಷಣ ಇಲಾಖೆಯವರು ಬಿಟ್ಟುಕೊಡಲು ಒಪ್ಪಿರುವುದಿಲ್ಲ.

ಡ) ಕೇಂದ್ರ ಬಸ್ ನಿಲ್ದಾಣದ ಸಮೀಪ ಇರುವ ಕಣಕಿ ಬಜಾರದ ಜಾಗವನ್ನು ಒದಗಿಸಲು ನಗರ ಸಭೆ ಆಯುಕ್ತರನ್ನು ಹಲವು ಬಾರಿ ಕೋರಲಾಗಿದೆ. ಈಗಾಗಲೇ ಅವರು ತಮ್ಮ ಸಭೆಯಲ್ಲಿಯೂ ಸಹ ಬಸ್ ನಿಲ್ದಾಣಕ್ಕೆ ಜಾಗ ಒದಗಿಸಲು ಠರಾವು ಮಾಡಿದ್ದು ಇನ್ನೂ ಸ್ಥಳ ಹಸ್ತಾಂತರವಾಗಿಲ್ಲ.

ಶ್ರೀ ಬಸವನಗೌಡ ರಾ. ಪಾಟೀಲ್ : ವಿಜಾಪುರ ನಗರದ ಬಸ್ ನಿಲ್ದಾಣದ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ವಿಜಾಪುರ ನಗರದ ಮಧ್ಯಭಾಗದಲ್ಲಿ ಬಸ್ ನಿಲ್ದಾಣ ಇದೆ. ಅಲ್ಲಿಯ ಸಾರ್ವಜನಿಕರಿಗೆ ಬಹಳ ದಿನಗಳಿಂದ ಅನಾನುಕೂಲವಾಗುತ್ತಿದೆ. ದಯಮಾಡಿ ಸರ್ಕಾರ ಆದಷ್ಟು ಬೇಗನೆ ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ? ಯಾವ ಸ್ಥಳವನ್ನು ನಿಗದಿ ಮಾಡಿದೆ? ಯಾವಾಗ ಹೊಸ ಬಸ್ ನಿಲ್ದಾಣ ಮಾಡುತ್ತೀರಿ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬಿಜಾಪುರ ನಗರಕ್ಕೆ ಈಗಿರುವ ಬಸ್ ನಿಲ್ದಾಣ ಸಾಲುವುದಿಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸರ್ಕಾರಕ್ಕೆ ನಗರ ಸಾರಿಗೆಗಾಗಿ ಪ್ರತ್ಯೇಕವಾದ ಬಸ್ ನಿಲ್ದಾಣ ಮಾಡತಕ್ಕಂಥದ್ದು ಅವಶ್ಯಕತೆ ಇದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಮತ್ತು ನಾವು ಪ್ರಯತ್ನ ಮಾಡಿ, ಅಲ್ಲಿ ಜಾಗದ ಪ್ರಶ್ನೆ ಏನು ಇದೆ, ಆ ಜಾಗ ಸಿಕ್ಕ ತಕ್ಷಣ ನಾನು ಮಾಡಲಿಕ್ಕೆ ತಯಾರಾಗಿದ್ದೇನೆ. ಅದಕ್ಕೆ ಹಣ ಇದೆ. ಜಾಗದ ತೊಂದರೆ ಇರುವುದರಿಂದ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಜಾಗ ಎಷ್ಟು ಬೇಗ ಸಿಗುತ್ತದೆಯೋ ಅಷ್ಟು ಬೇಗ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಬಸವನಗೌಡ ರಾ. ಪಾಟೀಲ್ : ವಿಜಾಪುರ ನಗರದ ಮಧ್ಯಭಾಗದ ಗಾಂಧಿಚೌಕ ಪೋಲೀಸ್ ಠಾಣೆಯ ಹತ್ತಿರ ಸಾಕಷ್ಟು ಜಾಗದ ಸೌಲಭ್ಯ ಇದೆ. ಸರ್ಕಾರ ದಯಮಾಡಿ ಆ ಒಂದು ಸ್ಥಳದಲ್ಲಿ ಮಾಡಿದರೆ, ಅದು ನಗರದ ಮಧ್ಯಕೇಂದ್ರವಾಗಿರುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಸರ್ಕಾರಿ ಪೋಲೀಸ್ ಸ್ಟೇಷನ್ ಹತ್ತಿರ ಜಮೀನು ಇರುವುದರಿಂದ ಅದನ್ನು ಪರಿಶೀಲಿಸಬಹುದೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಲ್ಲಿರತಕ್ಕಂಥ ಕಟ್ಟಡಗಳನ್ನು ತೆಗೆದು ಬಸ್ ನಿಲ್ದಾಣವನ್ನು ಮಾಡುವುದಕ್ಕೆ ಅನುಕೂಲವಾಗುವುದಾದರೆ ನಾನು ಪ್ರಾರಂಭ ಮಾಡುತ್ತೇನೆ.

ಸುಳ್ಯ ತಾಲ್ಲೂಕಿನ ರಸ್ತೆ ದುರಸ್ಥಿಗಾಗಿ ಎ.ಪಿ.ಎಂ.ಸಿ.ಯು ಬಿಡುಗಡೆ ಮಾಡಿದ ಹಣ

355 - ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸುಳ್ಯ ತಾಲ್ಲೂಕಿನ 5 ರಸ್ತೆಗಳು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಗೆ ಸೇರಿದ್ದು, ಈವರೆಗೆ ಸದರಿ ರಸ್ತೆಯ ದುರಸ್ಥಿ ಕಾಮಗಾರಿಯನ್ನು ಪ್ರಾರಂಭ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಯಾವಾಗ ಪ್ರಾರಂಭಮಾಡಲಾಗುವುದು?*

ಇ) *ಕೃಷಿ ಮಾರುಕಟ್ಟೆ ಇಲಾಖೆಯ ವತಿಯಿಂದ ಸುಳ್ಯ ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿಗೆ ತೆಗದಿಡಲಾದ ಹಣವೆಷ್ಟು?*

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು.

ಆ) ಕೆಲಸ ಪ್ರಾರಂಭಿಸಲು ದಿನಾಂಕ 27.4.98ರಂದು ಆದೇಶ ನೀಡಲಾಗಿದೆ.

ಇ) 1995-96ಕ್ಕೆ ರೂ. 15.00 ಲಕ್ಷ

1996-97ಕ್ಕೆ ರೂ. 15.00 ಲಕ್ಷ

ಶ್ರೀ ಎಸ್. ಅಂಗಾರ : ಮಾನ್ಯ ಅಧ್ಯಕ್ಷರೆ, ಸುಳ್ಯ ತಾಲ್ಲೂಕಿನ 5 ರಸ್ತೆಗಳು ಎ.ಪಿ.ಎಂ.ಸಿ. ವ್ಯಾಪ್ತಿಗೆ ಸೇರಿದ್ದು, ಸದರಿ ದುರಸ್ಥಿ ಕಾಮಗಾರಿ ಪ್ರಾರಂಭ ಮಾಡಿಲ್ಲವೆನ್ನುವ ಪ್ರಶ್ನೆಯನ್ನು ಹಾಕಿದ್ದೇನೆ. ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ದಿನಾಂಕ 27.4.1998ಕ್ಕೆ ಆದೇಶವನ್ನು ನೀಡಿದ್ದೇವೆಂದು ಹೇಳಿದ್ದಾರೆ. ಕಳೆದ ಎರಡು ವರ್ಷಗಳಿಂದ ಯಾವುದೇ ರಸ್ತೆಗಳ ದುರಸ್ಥಿ ಕಾಮಗಾರಿ ಆಗಿಲ್ಲ. ಅಲ್ಲಿ ಸಾರ್ವಜನಿಕರು ಸತತವಾಗಿ ವಿರೋಧವನ್ನು ವ್ಯಕ್ತಪಡಿಸಿ ಹೋರಾಟವನ್ನೂ ಕೂಡ ಮಾಡಿದ್ದಾರೆ. ಆದಷ್ಟು ಶೀಘ್ರದಲ್ಲಿ